### ಹೇಗೆ ಸ್ಫೋಟಿಸಿತು

ಒಬ್ಬ ಟೀವಿ ವರದಿಗಾರ ಬಾಂಬ್ ಸ್ಫೋಟದಲ್ಲಿ ಗಾಯಗೊಂಡ ವ್ಯಕ್ತಿಗೆ ಮೈಕ್ ಹಿಡಿದು, 'ಬಾಂಬ್ ನೆಲಕ್ಕೆ ಬಿದ್ದ ಕೂಡಲೇ ಸ್ಫೋಟಿಸಿತೆ ಅಥವಾ ನೆಲಕ್ಕೆ ಬೀಳುವ ಮುನ್ನವೇ ಸ್ಫೋಟಿಸಿತೆ'? ವರದಿಗಾರನ ಪ್ರಶ್ನೆ ಕೇಳಿ, ಗಾಯಗೊಂಡಿದ್ದ ವ್ಯಕ್ತಿಗೆ ತುಂಬ ಕೋಪ ಬಂತು. ಬಳಿಕ ಹೀಗೆ ಉತ್ತರಿಸಿದ. 'ಇಲ್ಲ ಅದು ತೆವಳುತ್ತಾ ನಿಧಾನವಾಗಿ ನನ್ನ ಕಡೆಗೆ ಬಂತು ಆಮೇಲೆ ನಾಚುತ್ತ ಢಂ ಅಂತ ಸ್ಫೋಟಿಸಿತು.

★★★

### ಹೆಂಡತಿ?

ಪ್ರಶ್ನೆ: ಹೆಂಡತಿ ಎಂದರೆ ಏನು?

ಉತ್ತರ: ಹೆಂಡತಿ ಎಂದರೆ ಒಂದು ಶಕ್ತಿ. ಕೇವಲ ಅವಳನ್ನು ನೋಡಿದ ಮಾತ್ರಕ್ಕೆ ಹಾಗಲಕಾಯಿ ಪಲ್ಯ ಕಾಜುಕುರ್ಮ ಆಗಿ ಪರಿವರ್ತನೆ ಹೊಂದುವಂತಹ ಶಕ್ತಿಯನ್ನು ಹೊಂದಿರುವಳೇ ಹೆಂಡತಿ.

★★★

ಅಧ್ಯಾಪಕ: ಸ್ವರ ಹಾಗೂ ವ್ಯಂಜನಗಳ ನಡುವಿನ ವ್ಯತ್ಯಾಸವೇನು?

ವಿದ್ಯಾರ್ಥಿ: ಸ್ವರಗಳು ಬಾಯಿಯಿಂದ ಹೊರಗೆ ಬರುತ್ತವೆ. ವ್ಯಂಜನಗಳು ಬಾಯಿಯ ಒಳಗೆ ಹೋಗುತ್ತವೆ!

(ಸಂಗ್ರಹ) ಮುರಲೀಧರ ಕುಲಕರ್ಣಿ,
ಬೀದರ್

### ಟೇಬಲ್ ಫಾರ್ ಫೋರ್

ಹಳ್ಳಿಯಿಂದ ಬೆಂಗಳೂರಿಗೆ ಬಂದ ಸೋಂಪನನ್ನು ಅವನ ಮೂರು ಜನ ಸ್ನೇಹಿತರು ಡಿನ್ನರ್ ಕೊಡಿಸಲು ಪೀಡಿಸಿದರು.

ಸರಿ ಎಂದು ಮಾಂಕು ಒಪ್ಪಿಕೊಂಡ. ಆಗ ಅವನ ಮಿತ್ರ ಕೇಶವ ಹೋಟೆಲೊಂದಕ್ಕೆ ಫೋನ್ ಮಾಡಿ 'ಪ್ಲೀಸ್ ಬುಕ್ ಟೇಬಲ್ ಫಾರ್ ಫೋರ್' ಎಂದ. ಆಗ ಸೋಂಪ 'ನಿಂಗೆ ಮಂಡೆ ಸಮ ಉಂಟ ಕೇಶವ? ನಮಗೆ ನಾಲ್ಕು ಟೇಬಲ್ ಎಂತದಕ್ಕೆ? ಒಂದು ಸಾಕು. ಚೇರ್ ನಾಲ್ಕು ಬೇಕು' ಎಂದವನು ತಾನೇ ಫೋನಿನಲ್ಲಿ 'ನಮಗೆ ಒಂದು ಟೇಬಲ್ ಮತ್ತೆ ನಾಲ್ಕು ಚೇರ್ ಬುಕ್ ಮಾಡಿ ಆಯ್ತಾ' ಎಂದಾಗ ಹೋಟೆಲ್‌ನವನು ಸುಸ್ತು.

★★★

### ಸೋಂಪನ ಬಿಪಿ

ಕೇಶವನನ್ನು ಅವನ ಹೆಂಡತಿ ವಿಮಲ ಡಾಕ್ಟರ್ ಹತ್ರ ಕರೆದುಕೊಂಡು ಹೋದ್ಳು.

ವಿಮಲ 'ಡಾಕ್ಟ್ರೇ, ನಮ್ಮೆಜಮಾನ್ರಿಗೆ ಆಫೀಸಿನಿಂದ ಮನೆಗೆ ಬಂದಾಗ ಸಿಕ್ಕಾಪಟ್ಟೆ ಬಿಪಿ ಇರುತ್ತದೆ'

ಡಾಕ್ಟ್ರು ಪರೀಕ್ಷಿಸುತ್ತಾ 'ಹೌದು. ಇವರ ಬಿಪಿ ತುಂಬಾ ಜಾಸ್ತಿ ಇದೆ. ಹಾಗಾಗಿ ನೀವು ಕಂಪೆನಿ ಬದಲಿಸಿ'

ತಕ್ಷಣ ಕೇಶವ 'ಡಾಕ್ಟ್ರೇ, ನನ್ನ ಬಿಪಿ ಆಫೀಸಿನಲ್ಲಿ ನಾರ್ಮಲ್ ಇರುತ್ತೆ. ಮನೆಗೆ ಬಂದ್ರೆ ಮಾತ್ರ ಜಾಸ್ತಿ ಆಗುತ್ತೆ!' ಎಂದಾಗ ಕೂಡಲೇ ಡಾಕ್ಟ್ರು 'ಹಾಗಾದ್ರೆ ನೀವು ಬದಲಿಸಬೇಕಾದ್ದು, ಕಂಪೆನಿಯಲ್ಲ,!' ಎಂದು ಏನೋ ಹೇಳಬೇಕ್ಕಿದ್ದವರು ವಿಮಲಳ ಕೆಂಗಣ್ಣು ನೋಡಿ ಉಗುಳು ನುಂಗಿದ್ರು.

★★★

### ಹಾಲಿಡೇ ಪ್ಲಾನ್

ಮಾಂಕು: ಕೇಶವ, ನೀನು ಈ ಸಲ ರಜೆಯಲ್ಲಿ ಎಲ್ಲಿಗೆ ಹೋಗುವ ಪ್ಲಾನ್ ಮಾಡಿದ್ರಿ?

ಕೇಶವ: ಫ್ಯಾಮಿಲಿ ಸಮೇತ ಅಮೆರಿಕಾಕ್ಕೆ ಪ್ಲಾನ್ ಮಾಡಿದ್ದೇವೆ.

ಮಾಂಕು: ವೆರಿ ಗುಡ್! ಮತ್ತೆ ಕಳೆದ ವರ್ಷ?

ಕೇಶವ: ಯೂರೋಪಿಗೆ ಪ್ಲಾನ್ ಮಾಡಿದ್ದು!

ಮಾಂಕು: ಓ ಹೌದಾ ಮಾರ್‍ರೆ!, ಹಾಗಾದರೆ ನೀವು ತುಂಬಾ ಶ್ರೀಮಂತರಿರಬೇಕು..!

ಕೇಶವ: ಶ್ರೀಮಂತಿಕೆ ಮಣ್ಣಾಂಗಟ್ಟಿ!. ಪ್ಲಾನ್ ಮಾಡುವುದಕ್ಕೆ ದುಡ್ಡು ಯಾಕೆ?

★★★

### ನಾನೂ ಅಷ್ಟೇ

ಕೇಶವ: ವಿಮಲ, ಒಂದು ವೇಳೆ ನಾನು ಹೋಗ್ಬಿಟ್ರೆ ನೀನು ಇನ್ನೊಂದು ಮದುವೆ ಮಾಡಿಕೊಳ್ತೀಯಾ?

ವಿಮಲ: ಇಲ್ಲಪ್ಪ. ಅಂತಹ ಸಂದರ್ಭ ಬಂದ್ರೆ ನಾನು ನನ್ನ ತಂಗಿ ನಿರ್ಮಲ ಜೊತೆಗಿರ್ತೇನೆ.

ಕೇಶವ: ಹ್ಞಂ. ಒಳ್ಳೆಯ ನಿರ್ಧಾರವೇ.!

ವಿಮಲ: ರೀ, ಒಂದು ವೇಳೆ ನಾನೇ ಹೋಗ್ಬಿಟ್ರೆ, ನೀವು ಬೇರೆ ಮದ್ವೆಯಾಗ್ತೀರಾ?

ಕೇಶವ: 'ಇಲ್ಲಪ್ಪಾ, ನಾನೂ ಅಷ್ಟೇ!. ನಿನ್ನ ತಂಗಿ ನಿರ್ಮಲ ಜೊತೆಗೆ ಇದ್ದು ಬಿಡ್ತೇನೆ..!

★★★

### ಟೈಮ್ ಸರಿಯಿಲ್ಲ

ಬಸ್ಸನ್ನು ಮಿಸ್ ಮಾಡಿಕೊಂಡ ಸೋಂಪ ಬಸ್ ನಿಲ್ದಾಣದಲ್ಲಿ ಮಂಡೆಬಿಸಿಯಲ್ಲಿ ಕುಳಿತುಕೊಂಡಿದ್ದ. ಅದನ್ನು ಗಮನಿಸಿದ ಮಾಂಕು ಅಲ್ಲಿಗೆ ಬಂದು 'ಸೋಂಪ, ಎಂತ ಆಯಿತು' ಎಂದ.

ಮಾಂಕು 'ಏನೂಂತ ಹೇಳುವುದು ಸೋಂಪ, ನನ್ನ ಟೈಮ್ ಸರಿಯಿಲ್ಲದಿದ್ದರೆ?'

ಸೋಂಪ, 'ಮಂಡೆಬಿಸಿ ಮಾಡಬೇಡ ಮಾಂಕು. ಎಲ್ಲರಿಗೂ ಒಂದಲ್ಲಾ ಒಂದು ದಿನ ಒಳ್ಳೆಯ ಟೈಮ್ ಬರುತ್ತದೆ.'

ಮಾಂಕು, 'ಮಾರಾಯ, ನಾನು ಹೇಳಿದ್ದು ನನ್ನ ವಾಚಿನಲ್ಲಿ ಟೈಮ್ ಸರಿಯಿಲ್ಲ ಅಂತ. ಇದು ಹತ್ತು ನಿಮಿಷ ಹಿಂದೆ ಇದ್ದದ್ದಕ್ಕೆ ನಾನು ಇಲ್ಲಿಗೆ ಬರುವಷ್ಟರಲ್ಲಿ ಬಸ್ಸು ಹೋಯಿತು...!'

(ಸಂಗ್ರಹ) ರಮೇಶ್ ಶೆಟ್ಟಿಗಾರ್,
ಮಂಜೇಶ್ವರ


ಓಂ ✝ ☪ ಸರ್ವೇಜನಃ ಸುಖಿನೋ ಭವಂತುಃ ಓಂ ✝ ☪

ಸಮಸ್ಯೆ ನಿಮ್ಮದು ಪರಿಹಾರ ನಮ್ಮದು



ಶ್ರೀ ಸಾಯಿಬಾಬ ಉಪಾಸಕರು

ದಕ್ಷಿಣ ಭಾರತದಾದ್ಯಂತ ಜನಮನ್ನಣೆ ಪಡೆದಿರುವ ವಂಶಪಾರಂಪರಿಕ

ವಶೀಕರಣ ಮಾಂತ್ರಿಕರು

ಶ್ರೀಯುತ ಪರಶುರಾಮ್ ಗುರೂಜಿ

ಸ್ತ್ರೀ ಪುರುಷ ವಶೀಕರಣ, ಸತಿಪತಿ ಕಲಹ, ಡೈವೋರ್ಸ್ ಪ್ರಾಬ್ಲಮ್, ಸಾಲಬಾಧೆ, ಪ್ರೇಮವಿಚಾರ, ಸಂತಾನಫಲ, ವ್ಯಾಪಾರಾಭಿವೃದ್ಧಿ, ಜಮೀನು ವಿಚಾರ, ಕೋರ್ಟ್‌ಕೇಸ್, ಮಾಟಮಂತ್ರ, ಪ್ರೇತಬಾಧೆ ಇನ್ನಿತರ ನಿಮ್ಮ ಸಮಸ್ಯೆ ಏನೇ ಇರಲಿ ಎಷ್ಟೇ ಕಠಿಣವಾಗಿರಲಿ ಕೇರಳ ಮತ್ತು ಕೊಳ್ಳೇಗಾಲದ 16ನೇ ಶತಮಾನದ ಪ್ರಾಚೀನ ತಾಳೆಗ್ರಂಥದ ರಹಸ್ಯವಾದ ಮಹಾರುದ್ರಶೂಲ ಪ್ರಣವಶಕ್ತಿಯಿಂದ

ಕೇವಲ 5 ದಿನದಲ್ಲಿ 100% ಪರಿಹಾರ ಶತಸಿದ್ಧ

ನೀವು ಎಷ್ಟೋ ದೈವ, ದೇವಸ್ಥಾನ ಮತ್ತು ಜ್ಯೋತಿಷ್ಯರಲ್ಲಿ ಕೇಳಿ ಪರಿಹಾರ ಸಿಗದೆ ನೊಂದಿದ್ದರೆ ಶೀಘ್ರ ಪರಿಹಾರಕ್ಕಾಗಿ ಇವರನ್ನೊಮ್ಮೆ ಭೇಟಿಮಾಡಿ.

ಇಲ್ಲಿ ಹೇಳುವ ವಿಷಯವನ್ನು ಗುಪ್ತವಾಗಿಡಲಾಗುವುದು ಹಾಗೂ ಗುರೂಜಿಯವರಲ್ಲಿ ನಿಸ್ಸಂಕೋಚದಿಂದ ಮಾತನಾಡಲು ಕರೆಮಾಡಿ:

9620444460

ಖಾಯಂ ಮನೆ ವಿಳಾಸ: ಜೈಬಾಲಾಜಿ ಜ್ಯೋತಿಷ್ಯಂ

ಬನಶಂಕರಿ ದೇವಸ್ಥಾನದ ಹತ್ತಿರ, ಮುಖ್ಯಬಸ್‌ನಿಲ್ದಾಣದ ಪಕ್ಕದಲ್ಲಿ, ಬನಶಂಕರಿ ಬೆಂಗಳೂರು.

ವಿಶೇಷ ಸೂಚನೆ: ಈ ಪೇಪರ್ ಕಟ್ಟಿಂಗ್ ತಂದವರಿಗೆ ಮುಜರಾಯಿ ಇಲಾಖೆ ಮತ್ತು ಧಾರ್ಮಿಕ ದತ್ತಿ ಇಲಾಖೆ ಹಾಗೂ ಮಾಡಾಯಿಕಾವ್ ಭಗವತಿ ದೇವಸ್ಥಾನಂ (ತಳಿಪರಂ) ಕೇರಳ ವತಿಯಿಂದ ಉಚಿತ ಸೇವೆಗಳು ಮತ್ತು ಪರಿಹಾರಗಳು ಲಭ್ಯವಿದೆ.